aglasem.com

FOR KARNATAKA CLASS 10 PREPARATION

Karnataka SSLC Model Question Paper 2027 for Economics (Paper 2, Kannada Medium) Key Answers

EXAM	YEAR	TYPE	SUBJECT
Karnataka Class 10	2027	Answer Key	Economics

96-K

ಕರ್ನಾಟಕ ಶಾಲಾ ಪರೀಕ್ಷೆ ಮತ್ತು ಮೌಲ್ಯನಿರ್ಣಯ ಮಂಡಲಿ

6ನೇ ಅಡ್ಡರಸ್ತೆ, ಮಲ್ಲೇಶ್ವರಂ, ಬೆಂಗಳೂರು – 560003

KARNATAKA SCHOOL EXAMINATION AND ASSESSMENT BOARD

6th Cross, Malleshwaram, Bengaluru – 560 003

ಮಾದರಿ ಉತ್ತರಗಳು

MODEL ANSWERS

2026–27 ರ ಎಸ್.ಎಸ್.ಎಲ್.ಸಿ. ಮಾದರಿ ಪ್ರಶ್ನೆಪತ್ರಿಕೆ – 2

S.S.L.C. MODEL QUESTION PAPER - 2 : 2026-27

ವಿಷಯ : ಅರ್ಥಶಾಸ್ತ್ರ

Subject : ECONOMICS

ವಿಷಯ ಸಂಕೇತ : **96-K** | **Subject Code : 96-K**

ಸಮಯ : 3 ಗಂಟೆ 15 ನಿಮಿಷಗಳು] | [Time : 3 Hours 15 Minutes

ಗರಿಷ್ಠ ಅಂಕಗಳು : 100] | [Max. Marks :100

I. ಕೆಳಗಿನ ಪ್ರಶ್ನೆಗಳಿಗೆ ಅಥವಾ ಅಪೂರ್ಣ ಹೇಳಿಕೆಗಳಿಗೆ ನಾಲ್ಕು ಆಯ್ಕೆಗಳನ್ನು ನೀಡಲಾಗಿದೆ. ಅವುಗಳಲ್ಲಿ ಸೂಕ್ತವಾದ ಒಂದು ಉತ್ತರವನ್ನು ಆರಿಸಿ, ಅದರ ಕ್ರಮಾಕ್ಷರದೊಂದಿಗೆ ಬರೆಯಿರಿ. 10×1=10

1. ಕೌಶಲ್ಯರಹಿತ ಕಾರ್ಮಿಕರು ಸಾಮಾನ್ಯವಾಗಿ ವಲಸೆ ಹೋಗುವುದು,

a) ಹಳ್ಳಿಯಿಂದ ಹಳ್ಳಿಗಳಿಗೆ
b) ಹಳ್ಳಿಯಿಂದ ನಗರಗಳಿಗೆ
c) ನಗರದಿಂದ ಹಳ್ಳಿಗಳಿಗೆ
d) ನಗರದಿಂದ ನಗರಗಳಿಗೆ

ಉತ್ತರ : b) ಹಳ್ಳಿಯಿಂದ ನಗರಗಳಿಗೆ

2. ಉಕ್ಕನ್ನು ಅತಿ ಕಡಿಮೆ ವೆಚ್ಚದಲ್ಲಿ ಉತ್ಪಾದಿಸುವ ರಾಷ್ಟ್ರ

a) ಭಾರತ b) ಬ್ರೆಜಿಲ್ c) ರಷ್ಯಾ d) ಚೀನಾ

ಉತ್ತರ a) ಭಾರತ

3. ನಾಗರಿಕತೆಗಳು ಉಗಮವಾದದ್ದು,

a) ಸಮುದ್ರ ತೀರಗಳಲ್ಲಿ b) ಮರಳುಗಾಡುಗಳಲ್ಲಿ

c) ನದಿಯ ದಡಗಳಲ್ಲಿ d) ಪರ್ವತಗಳಲ್ಲಿ

ಉತ್ತರ : c) ನದಿಯ ದಡಗಳಲ್ಲಿ

4. ಬಾಂಬೆ ಹೈ ಪ್ರಸಿದ್ಧಿಯಾಗಿರುವುದು,

a) ಕಲ್ಲಿದ್ದಲಿಗೆ b) ಅಣುಶಕ್ತಿಗೆ c) ಪೆಟ್ರೋಲಿಯಂಗೆ d) ಸೌರ ಶಕ್ತಿಗೆ

ಉತ್ತರ : c) ಪೆಟ್ರೋಲಿಯಂಗೆ

5. ಭಾರತದಲ್ಲಿ ಒಂದು ಹೆಣ್ಣು ಮಗುವಿನ ಮದುವೆಯಾಗುವ ಕನಿಷ್ಠ ವಯಸ್ಸು,

a) 15 ವರ್ಷಗಳು b) 21 ವರ್ಷಗಳು c) 19 ವರ್ಷಗಳು d) 18 ವರ್ಷಗಳು

ಉತ್ತರ : d) 18 ವರ್ಷಗಳು

6. ಇವುಗಳಲ್ಲಿ ಸಾಂಕ್ರಾಮಿಕ ರೋಗ,

a) ಕ್ಯಾನ್ಸರ್ b) ಸಿಡುಬು c) ಮಲೇರಿಯಾ d) ಮೂರ್ಛೆರೋಗ

ಉತ್ತರ : b) ಸಿಡುಬು

7. ಜಮೀನ್ದಾರಿ ಪದ್ಧತಿಯನ್ನು ಜಾರಿಗೆ ತಂದವರು,

a) ಕಾರ್ನ್ ವಾಲೀಸ್

b) ವೆಲ್ಲೆಸ್ಲಿ

c) ರಾಬರ್ಟ್ ಕ್ಲೈವ್

d) ಥಾಮಸ್ ಮುನ್ರೊ

ಉತ್ತರ : a) ಕಾರ್ನ್ ವಾಲೀಸ್

8. ಎಂಡೋಸಲ್ಫಾನ್ ಕ್ರಿಮಿನಾಶಕವು ವ್ಯತಿರಿಕ್ತ ಪರಿಣಾಮ ಬೀರಿರುವುದು

a) ತಮಿಳುನಾಡಿನ ಜನರ ಆರೋಗ್ಯದ ಮೇಲೆ b) ಕರ್ನಾಟಕದ ಜನರ ಆರೋಗ್ಯದ ಮೇಲೆ

c) ಕೇರಳದ ಜನರ ಆರೋಗ್ಯದ ಮೇಲೆ d) ಮಹಾರಾಷ್ಟ್ರದ ಜನರ ಆರೋಗ್ಯದ ಮೇಲೆ

ಉತ್ತರ : c) ಕೇರಳದ ಜನರ ಆರೋಗ್ಯದ ಮೇಲೆ

9. ಎಲ್ಲಾ ಆರ್ಥಿಕ ಚಟುವಟಿಕೆಗಳ ಜೀವನಾಡಿ,

a) ಭೂಮಿ

b) ಶ್ರಮ

c) ಸಂಘಟನೆ

d) ಹಣಕಾಸು

ಉತ್ತರ : d) ಹಣಕಾಸು

10. ಸೇವಾ ಕೈಗಾರಿಕೆಯ ಹೂಡಿಕೆಯಲ್ಲಿನ ಗರಿಷ್ಠ ಮಿತಿ,

a) 10 ಲಕ್ಷ ರೂಪಾಯಿಗಳು

b) 15 ಲಕ್ಷ ರೂಪಾಯಿಗಳು

c) 20 ಲಕ್ಷ ರೂಪಾಯಿಗಳು

d) 25 ಲಕ್ಷ ರೂಪಾಯಿಗಳು

ಉತ್ತರ : a) 10 ಲಕ್ಷ ರೂಪಾಯಿಗಳು

II. 11. 'ಎ' ಪಟ್ಟಿಯನ್ನು 'ಬಿ' ಪಟ್ಟಿಯೊಂದಿಗೆ ಹೊಂದಿಸಿ, ಉತ್ತರವನ್ನು ಅದರ ಕ್ರಮಾಕ್ಷರದೊಂದಿಗೆ ಬರೆಯಿರಿ. **5×1=5**

ಎ – ಪಟ್ಟಿ	ಬಿ– ಪಟ್ಟಿ
a) ದಕ್ಷಿಣ ರೈಲ್ವೆ	4) ಚೆನ್ನೈ
b) ನೈರುತ್ಯ ರೈಲ್ವೆ	3) ಹುಬ್ಬಳ್ಳಿ
c) ಪೂರ್ವ ಕರಾವಳಿ ರೈಲ್ವೆ	5) ಭುವನೇಶ್ವರ್
d) ವಾಯುವ್ಯ ರೈಲ್ವೆ	1) ಜೈಪುರ
e) ದಕ್ಷಿಣ ಮಧ್ಯ ರೈಲ್ವೆ	2) ಸಿಕಂದರಾಬಾದ್

III. ಈ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರ ಬರೆಯಿರಿ. **15×1=15**

12. ಕೃಷಿ ಹಣಕಾಸಿನ ಅತ್ಯುನ್ನತ ಬ್ಯಾಂಕ್ ಯಾವುದು?

ಉತ್ತರ: ನಬಾರ್ಡ್

13. ಕೂಲಿಗಾಗಿ ಕಾಳು ಯೋಜನೆಯ ಮುಖ್ಯ ಉದ್ದೇಶವೇನು?

ಉತ್ತರ: ಗ್ರಾಮೀಣ ಪ್ರದೇಶದ ಜನರಿಗೆ ಹೆಚ್ಚಿನ ಉದ್ಯೋಗ ಒದಗಿಸಿ ಅವರು ಸೇವಿಸುವ ಆಹಾರ ಧಾನ್ಯಗಳ ಪ್ರಮಾಣವನ್ನು ಹೆಚ್ಚಿಸುವುದು.

14. ಜವಾಹರ್ ರೋಜ್ಗಾರ್ ಯೋಜನೆಯನ್ನು ಏಕೆ ಜಾರಿಗೊಳಿಸಲಾಗಿದೆ?

ಉತ್ತರ: ದೇಶದಲ್ಲಿ ಹೆಚ್ಚಿನ ಉದ್ಯೋಗಾವಕಾಶಗಳನ್ನು ಸೃಷ್ಟಿಸಲು.

15. ಪಕ್ಕಾ ರಸ್ತೆಗಳು ಎಂದರೇನು?

ಉತ್ತರ: ವರ್ಷವಿಡಿ ಬಳಕೆ ಮಾಡಲು ಯೋಗ್ಯವಾಗಿರುವ ರಸ್ತೆಗಳು

16. ಭಾರತದಲ್ಲಿ ಮುಕ್ತ ವಾಯು ನೀತಿಯ ಪರಿಣಾಮವೇನು?

ಉತ್ತರ: ಖಾಸಗಿ ಸಂಸ್ಥೆಯ ವಿಮಾನಗಳು ದೇಶದಲ್ಲಿ ಕಾರ್ಯನಿರ್ವಹಿಸಲು ಶುರು ಮಾಡಿದವು.

17. ವಿಶ್ವದ ಪುರಾತನ ಕೇಂದ್ರ ಬ್ಯಾಂಕನ್ನು ಹೆಸರಿಸಿ.

ಉತ್ತರ: ಸ್ವೀಡನ್ನಿನ ರಿಕ್ಸ್ ಬ್ಯಾಂಕ್

18. ವ್ಯಾಪಾರ ಎಂದರೇನು?

ಉತ್ತರ: ಸರಕು ಮತ್ತು ಸೇವೆಗಳನ್ನು ಮಾರುವ ಇಲ್ಲವೇ ಕೊಳ್ಳುವ ಪ್ರಕ್ರಿಯೆ.

19. ಮೂಢನಂಬಿಗಳು ಆರ್ಥಿಕ ಅಭಿವೃದ್ಧಿಗೆ ತೊಡಕಾಗಿವೆ. ಹೇಗೆ?

ಉತ್ತರ: ಇವು ಜನರನ್ನು ವಿವೇಚನಾಯುಕ್ತವಾಗಿ ಚಿಂತಿಸಲು ಅಡ್ಡಿಪಡಿಸುತ್ತವೆ.

20. ಗಿನಿ ಸೂಚ್ಯಂಕವನ್ನು ಏಕೆ ಬಳಸಲಾಗುತ್ತದೆ?

ಉತ್ತರ: ಅಸಮಾನತೆಯನ್ನು ಅಳೆಯಲು

21. ಫೋಟೋವೋಲ್ಟಾಯಿಕ್ ವಿಧಾನವನ್ನು ಏಕೆ ಬಳಸಲಾಗುತ್ತದೆ?

ಉತ್ತರ: ಸೌರ ಶಕ್ತಿಯನ್ನು ವಿದ್ಯುತ್ ಶಕ್ತಿಯಾಗಿ ಪರಿವರ್ತಿಸಲು.

22. ಕೈಗಾ ಏಕೆ ಪ್ರಸಿದ್ಧಿಯಾಗಿದೆ?

ಉತ್ತರ: ಅಣು ವಿದ್ಯುತ್ತನ್ನು ಉತ್ಪಾದಿಸಲು

23. ಸಾಂದ್ರಿಕೃತ ನೈಸರ್ಗಿಕ ಅನಿಲವನ್ನು ಸಾರ್ವಜನಿಕ ಸಾರಿಗೆ ವ್ಯವಸ್ಥೆಯಲ್ಲಿ ಬಳಸಲಾಗುತ್ತಿದೆ. ಏಕೆ?

ಉತ್ತರ: ವಾಯು ಮಾಲಿನ್ಯವನ್ನು ನಿವಾರಿಸಲು

24. ಭೂ ಸಂರಕ್ಷಣೆ ಎಂದರೇನು?

ಉತ್ತರ: ಮಣ್ಣಿನ ಫಲವತ್ತತೆಯನ್ನು ಹೆಚ್ಚಿಸುವ ಪ್ರಕ್ರಿಯೆ

25. ಕುಟುಂಬ ಯೋಜನೆ ಎಂದರೇನು?

ಉತ್ತರ: ಕುಟುಂಬದ ಗಾತ್ರವನ್ನು ಉದ್ದೇಶಪೂರ್ವಕವಾಗಿ ನಿಯಂತ್ರಿಸುವ ವಿಧಾನ.

26. ನಿಯಂತ್ರಿತ ಮಾರುಕಟ್ಟೆಗಳನ್ನು ಏಕೆ ಜಾರಿಗೆ ತರಲಾಗಿದೆ?

ಉತ್ತರ: ಕೃಷಿ ಮಾರುಕಟ್ಟೆ ವ್ಯವಸ್ಥೆಯನ್ನು ಸುಧಾರಿಸಲು.

IV. ಈ ಪ್ರಶ್ನೆಗಳಿಗೆ ಎರಡರಿಂದ ಅಥವಾ ನಾಲ್ಕು ವಾಕ್ಯಗಳಲ್ಲಿ / ಅಂಶಗಳಲ್ಲಿ ಉತ್ತರಿಸಿ. **14×2=28**

27. ಮಾನವ ಅಭಿವೃದ್ಧಿ ಸೂಚ್ಯಂಕಗಳನ್ನು ಹೆಸರಿಸಿ.

ಉತ್ತರ:

* ಆರೋಗ್ಯವಂತ ಜೀವನ
* ಜ್ಞಾನ
* ಉತ್ತಮ ಜೀವನ ಮಟ

28. ಫೆಮಾ ದ ಉದ್ದೇಶಗಳು ಯಾವುವು?

ಉತ್ತರ:

* ಬಾಹ್ಯ ವ್ಯಾಪಾರ ಮತ್ತು ಪಾವತಿಗಳ ಸುಗಮತೆಗೆ ಸೌಲಭ್ಯಗಳನ್ನು ಒದಗಿಸಲು
* ವಿದೇಶಿ ವಿನಿಮಯ ಮಾರುಕಟ್ಟೆಯ ಕ್ರಮಬದ್ಧ ನಿರ್ವಹಣೆ ಮತ್ತು ಅಭಿವೃದ್ಧಿಗೊಳಿಸಲು

29. ಕೃಷಿ ಕಾರ್ಮಿಕರ ಸಾಮಾಜಿಕ ಮತ್ತು ಆರ್ಥಿಕ ಸ್ಥಾನಮಾನಗಳನ್ನು ತಿಳಿಸಿ.

ಉತ್ತರ:

* ಕಡಿಮೆ ಜೀವನ ಮಟ್ಟ
* ಕಡಿಮೆ ಚೌಕಾಶಿ ಸಾಮರ್ಥ್ಯ
* ಸಾಲದ ಸುಳಿಯಲ್ಲಿ ಸಿಲುಕಿರುತ್ತಾರೆ
* ಋತುಮಾನ ಉದ್ಯೋಗ
* ಸಾಮಾಜಿಕ ಭದ್ರತಾ ಕ್ರಮಗಳ ಅಭಾವ

30. ಬಡತನ ನಿರ್ಮೂಲನೆಯಲ್ಲಿ ಸ್ವಸಹಾಯ ಗುಂಪುಗಳ ಪಾತ್ರವೇನು?

ಉತ್ತರ:

* ಗ್ರಾಮೀಣ ಜನರಿಗೆ ಲಾಭದಾಯಕ ಸ್ವಉದ್ಯೋಗಾವಕಾಶಗಳನ್ನು ನಿರ್ಮಿಸುವುದು
* ಉತ್ತಮ ಜೀವನ ನಿರ್ವಹಿಸಲು ಸಹಾಯ ಮಾಡುವುದು

31. ಭಾರತೀಯ ರಿಸರ್ವ್ ಬ್ಯಾಂಕ್‌ನ ಪ್ರಾದೇಶಿಕ ಕಚೇರಿಗಳನ್ನು ಎಲ್ಲಿ ಸ್ಥಾಪಿಸಲಾಗಿದೆ?

ಉತ್ತರ:

* ಕೊಲ್ಕತ್ತಾ
* ಮುಂಬೈ
* ನವದೆಹಲಿ
* ಚೆನ್ನೈ

32. ಭಾರತೀಯ ರಿಸರ್ವ್ ಬ್ಯಾಂಕಿನ ಅಭಿವೃದ್ಧಿ ಕಾರ್ಯಗಳು ಯಾವುವು?

ಉತ್ತರ:

* ಕೃಷಿ ಮತ್ತು ಕೈಗಾರಿಕಾ ವಲಯಗಳ ಅಭಿವೃದ್ಧಿಗೆ ಹಣಕಾಸನ್ನು ಒದಗಿಸುವುದು
* ಸಾಲವನ್ನು ಅದ್ಯಾತಾವಲಯಕ್ಕೆ ಒದಗಿಸಲು ಪರಿಣಾಮಕಾರಿ ಕ್ರಮಗಳನ್ನು ನಿರ್ದೇಶಿಸುವುದು
* ಆರ್ಥಿಕಾಭಿವೃದ್ಧಿ ಕಾರ್ಯಗಳಲ್ಲಿ ನಿರ್ಣಾಯಕ ಪಾತ್ರವನ್ನು ವಹಿಸುವುದು.

33. ಭಾರತೀಯ ರಿಸರ್ವ್ ಬ್ಯಾಂಕನ್ನು ಸರಕಾರದ ಬ್ಯಾಂಕ್ ಆಗಿ ವಿವರಿಸಿ?

ಉತ್ತರ:

* ಸರ್ಕಾರಗಳ ಠೇವಣಿ ಲೆಕ್ಕ ನಿರ್ವಹಣೆ
* ಸರ್ಕಾರಕ್ಕೆ ಮುಂಗಡ ಸಾಲ ನೀಡುವುದು
* ಆರ್ಥಿಕ ಸಲಹೆ , ಮಾರ್ಗದರ್ಶನ ನೀಡುವುದು

34. ಭಾರತದ ಪ್ರಮುಖ ಆಮದುಗಳನ್ನು ಹೆಸರಿಸಿ.

ಉತ್ತರ:

* ಪೆಟ್ರೋಲಿಯಂ
* ತೈಲ
* ಲೂಬ್ರಿಕೆಂಟ್
* ಬಂಡವಾಳ ಸರಕುಗಳು
* ಎಲೆಕ್ಟ್ರಾನಿಕ್ ಸರಕುಗಳು
* ಯಂತ್ರೋಪಕರಣಗಳು

35. ಅಭಿವೃದ್ಧಿ ಹೊಂದಿದ ರಾಷ್ಟ್ರಗಳು ಕೈಗಾರಿಕಾ ವಲಯಕ್ಕೆ ಹೆಚ್ಚಿನ ಪ್ರಾಮುಖ್ಯತೆಯನ್ನು ನೀಡುತ್ತವೆ. ಏಕೆ?

ಉತ್ತರ:

* ಸಂಪನ್ಮೂಲಗಳನ್ನು ದಕ್ಷವಾಗಿ ಬಳಸಿಕೊಳ್ಳುತ್ತವೆ
* ಹೆಚ್ಚಿನ ಉದ್ಯೋಗವನ್ನು ಸೃಷ್ಟಿಸುತ್ತವೆ
* ರಾಷ್ಟ್ರೀಯ ಆದಾಯವನ್ನು ಹೆಚ್ಚಿಸುತ್ತವೆ

36. ಭಾರತದಲ್ಲಿ ಮರಣ ದರವು ತೀವ್ರಗತಿಯಲ್ಲಿ ಇಳಿಕೆಯಾಗಿದೆ. ಏಕೆ?

ಉತ್ತರ:

* ಬರಗಾಲ ಮತ್ತು ಕ್ಷಾಮಗಳ ನಿಯಂತ್ರಣ
* ಸಾಂಕ್ರಾಮಿಕ ರೋಗಗಳ ನಿಯಂತ್ರಣ
* ಶೈಕ್ಷಣಿಕ ಸೌಲಭ್ಯದ ವಿಸ್ತರಣೆ
* ಇತರೆ ಅಂಶಗಳು

37. ರೈತವಾರಿ ಪದ್ಧತಿಯನ್ನು ವಿವರಿಸಿ?

ಉತ್ತರ:

* ಥಾಮಸ್ ಮುನ್ರೋ ಅವರು ಜಾರಿಗೆ ತಂದರು
* ತಮಿಳುನಾಡಿನಲ್ಲಿ ಜಾರಿಗೆ ತಂದರು
* ರೈತರೇ ಭೂಹಿಡುವಳಿಗಳ ಒಡೆಯರು
* ಸಾಗುವಳಿದಾರರೇ ಸರ್ಕಾರಕ್ಕೆ ನೇರವಾಗಿ ಭೂಕಂದಾಯವನ್ನು ಕಟ್ಟುತ್ತಿದ್ದರು

38. ವ್ಯಾಪಾರಸ್ಥರು ಮತ್ತು ದಲ್ಲಾಳಿಗಳು ರೈತರನ್ನು ಹೇಗೆ ಶೋಷಿಸುತ್ತಾರೆ?

ಉತ್ತರ:

* ರೈತರು ಬೆಳೆ ಕೊಯ್ಲಿನ ನಂತರ ತಮಗೆ ಮಾರಬೇಕೆಂಬ ನಿಬಂಧನೆ
* ಅಧಿಕ ಬಡ್ಡಿ ದರ

39. ಜಿಲ್ಲಾ ಕೈಗಾರಿಕಾ ಕೇಂದ್ರಗಳು ಸಣ್ಣ ಕೈಗಾರಿಕೆಗಳಿಗೆ ಹೇಗೆ ಸಹಾಯಕವಾಗಿವೆ?

ಉತ್ತರ:

* ಉತ್ತಮ ಮೂಲಭೂತ ಸೌಕರ್ಯಗಳನ್ನು ಒದಗಿಸುವುದು
* ಸಣ್ಣ ಉದ್ದಿಮೆಗಳ ಬೆಳವಣಿಗೆಗಳಿಗೆ ಸಹಕರಿಸುವುದು

40. ಭಾರತದಲ್ಲಿ ಜೀತ ಕಾರ್ಮಿಕರನ್ನು ಹೇಗೆ ಕರೆಯಲಾಗಿದೆ?

ಉತ್ತರ:

* ಪಣಿಯಾಸ್
* ಹಲಿಯಾ
* ಮುಲಿಯಾ
* ಕಮಿಯಾ
* ಹರಿಸ್

V. ಈ ಪ್ರಶ್ನೆಗಳಿಗೆ ಮೂರರಿಂದ ಆರು ವಾಕ್ಯಗಳಲ್ಲಿ / ಅಂಶಗಳಲ್ಲಿ ಉತ್ತರಿಸಿ. **6×3=18**

41. ಆರ್ಥಿಕ ಅಭಿವೃದ್ಧಿಯಲ್ಲಿ ಮಾನವ ಸಂಪನ್ಮೂಲದ ಪಾತ್ರವನ್ನು ವಿವರಿಸಿ?

ಉತ್ತರ:

* ಶ್ರಮದ ಪೂರೈಕೆ
* ರಾಷ್ಟ್ರ ರಕ್ಷಣೆ
* ಭೌತಿಕ ಬಂಡವಾಳದ ಸದ್ಬಳಕೆ
* ಸಂಶೋಧನೆ ಮತ್ತು ಆವಿಷ್ಕಾರ
* ಉತ್ತಮ ನಾಗರಿಕ ಸಮಾಜದ ಸೃಷ್ಟಿ
* ಸಾರಿಗೆ ಸಂಪರ್ಕದ ಅಭಿವೃದ್ಧಿ
* ಜನಸಂಖ್ಯೆಯ ಗುಣಮಟ್ಟದ ಅಭಿವೃದ್ಧಿ

42. ಭಾರತದಲ್ಲಿ ಭೂ ಸುಧಾರಣೆಗಳು ವಿಫಲವಾಗಿವೆ. ವಿವರಿಸಿ?

ಉತ್ತರ:

* ರಾಜಕೀಯ ಇಚ್ಛಾಶಕ್ತಿಯ ಕೊರತೆ
* ಗೇಣಿದಾರರಿಂದ ಸರಕಾರದ ಮೇಲೆ ಯಾವುದೇ ಒತ್ತಡ ಇಲ್ಲದಿರುವುದು
* ಅಸಂಘಟಿತ ರೈತರ ಉತ್ಸಾಹ ಹೀನತೆ

* ಅಧಿಕಾರ ಶಾಹಿಗಳ ನಿರ್ದಯ ವರ್ತನೆ
* ಭೂದಾಖಲೆಗಳ ಸರಿಯಾದ ಮಾಹಿತಿ ಇಲ್ಲದಿರುವುದು

43. ಭಾರತದಲ್ಲಿ ಕೃಷಿ ಹಣಕಾಸು ಏಕೆ ಪ್ರಮುಖವಾಗಿದೆ?

ಉತ್ತರ:

* ಕೃಷಿಯ ಅಭಿವೃದ್ಧಿ
* ಹಣ ಪಾವತಿ
* ಕೃಷಿ ಉತ್ಪಾದಕತೆಯ ಹೆಚ್ಚಳ
* ಕೃಷಿ ಸಲಕರಣೆಗಳು
* ನೈಸರ್ಗಿಕ ಅಂಶಗಳು
* ಆಧುನಿಕ ಕೃಷಿ ಪದ್ಧತಿ
* ಇತರೆ ಉದ್ದೇಶಗಳು

44. ಸಣ್ಣ ಕೈಗಾರಿಕೆಗಳ ಲಕ್ಷಣಗಳನ್ನು ತಿಳಿಸಿ.

ಉತ್ತರ:

* ಸುಲಭ ಸ್ಥಾಪನೆ
* ಕಡಿಮೆ ಹೂಡಿಕೆ ಮಿತಿ
* ಕೂಲಿಯ ಆಧಾರದ ಮೇಲೆ ಶ್ರಮ
* ಸ್ವಯಂ ಬೆಂಬಲ ನೀಡುವ ಕಾರ್ಮಿಕರು
* ಸ್ಥಳೀಯ ಕಚ್ಚಾ ಸಂಪನ್ಮೂಲಗಳ ಬಳಕೆ

45. ಕೈಗಾರಿಕಾ ಕಾರ್ಮಿಕರ ಲಕ್ಷಣಗಳು ಯಾವುವು?

ಉತ್ತರ:

* ಅರೆ ಕುಶಲಕರ್ಮಿಗಳು
* ಕಡಿಮೆ ದಕ್ಷತೆ
* ಒಗ್ಗಟ್ಟಿನ ಅಭಾವ
* ಅಸಂಘಟಿತ ಕಾರ್ಮಿಕರಿಗೆ ದೊರಕದ ಸಾಮಾಜಿಕ ಭದ್ರತೆ
* ನಾಯಕತ್ವದ ಕೊರತೆ

46. ಭಾರತದಲ್ಲಿ ಬಡತನ ನಿರ್ಮೂಲನಾ ಕಾರ್ಯಕ್ರಮಗಳು ವಿಫಲವಾಗಿವೆ. ಏಕೆ?

ಉತ್ತರ:

* ಅಸಮರ್ಪಕ ಅನುಷ್ಠಾನ
* ಪ್ರಯೋಜನವೂ ಬಡ ಜನರಿಗೆ ತಲುಪಲಿಲ್ಲ
* ಪ್ರಯೋಜನದಾರರ ತಪ್ಪು ಗುರುತಿಸುವಿಕೆ
* ಹಣಕಾಸಿನ ಸಹಾಯದಲ್ಲಿನ ಸೋರಿಕೆ
* ಕಾರ್ಯಕ್ರಮಗಳ ಕುರಿತು ತಿಳುವಳಿಕೆ ಇಲ್ಲದಿರುವುದು

VI. ಈ ಪ್ರಶ್ನೆಗೆ ಎಂಟು ಅಥವಾ ಹತ್ತು ವಾಕ್ಯಗಳಲ್ಲಿ / ಅಂಶಗಳಲ್ಲಿ ಉತ್ತರಿಸಿ. **1×4=4**

47. ವಿದೇಶಿ ವ್ಯಾಪಾರದಿಂದಾಗುವ ಪ್ರಯೋಜನಗಳಾವುವು?

ಉತ್ತರ:

* ಅಗತ್ಯ ಸರಕುಗಳ ಆಯಾತ
* ಸರಕುಗಳ ಬೆಲೆಯಲ್ಲಿ ಸಮಾನತೆ ಕಾಪಾಡುವುದು

* ಕೈಗಾರಿಕಾ ಅಭಿವೃದ್ಧಿ
* ಮಾರುಕಟ್ಟೆ ವಿಸ್ತರಣೆ
* ಬಂಡವಾಳ ಚಲನೆಯ ಅನುಕೂಲತೆಗಳು
* ಅಂತಾರಾಷ್ಟ್ರೀಯಶಾಂತಿ ಮತ್ತು ಸಹಕಾರ
* ಸಂಪನ್ಮೂಲಗಳ ಬಳಕೆ
* ವಿಜ್ಞಾನ ತಂತ್ರಜ್ಞಾನ ವರ್ಗಾವಣೆ.

****